STH-P-KND

CS (MAIN) Exam : 2017

ಕನ್ನಡ / KANNADA

ಪತ್ರಿಕೆ I / Paper I

(ಸಾಹಿತ್ಯ) / (LITERATURE)

ವೇಳೆ : **ಮೂರು** ಗಂಟೆ
*Time allowed : **Three** Hours*

ಗರಿಷ್ಠ ಅಂಕಗಳು : **250**
*Maximum Marks : **250***

ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡ**ದಲ್ಲಿಯೇ ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ. ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

Question Paper Specific Instructions

Please read each of the following instructions carefully before attempting questions :

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** from each section.*

The number of marks carried by a question / part is indicated against it.

*Answers must be written in **KANNADA**.*

Word limit in questions, wherever specified, should be adhered to.

Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

Optional Province · optionalprovince.com

SECTION A

Q1. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಶಬ್ದಗಳಿಗೆ ಮೀರದಂತೆ ಇರಬೇಕು ಪ್ರತಿ ಉಪಪ್ರಶ್ನೆಗೆ 10 ಅಂಕಗಳು. ***10×5=50***

(a) ದ್ರಾವಿಡ ಭಾಷೆಗಳ ವಿಶಿಷ್ಟ ಲಕ್ಷಣಗಳು *10*

(b) ವಿಕ್ರಮಾರ್ಜುನ ವಿಜಯದ ಕಥಾವಸ್ತುವಿನ ಅನನ್ಯತೆ *10*

(c) ಬಸವಣ್ಣನವರ ವಚನಗಳಲ್ಲಿ ಪ್ರಾಣಿ ರೂಪಕಗಳು *10*

(d) ದಾಸ ಸಾಹಿತ್ಯದಲ್ಲಿ ಭಕ್ತಿಯ ಸ್ವರೂಪ *10*

(e) ಕನ್ನಡ ನವೋದಯ ಕಾವ್ಯದಲ್ಲಿ ಉಪರಾಷ್ಟ್ರೀಯತೆಯ ಅಭಿವ್ಯಕ್ತಿ *10*

Q2. (a) ಕನ್ನಡದ ಪ್ರಮುಖ ಪ್ರಾದೇಶಿಕ ಉಪಭಾಷೆಗಳು ಯಾವುವು ? ಸೋದಾಹರಣವಾಗಿ ವಿವರಿಸಿ. *15*

(b) ಪ್ರಾಚೀನ ಕನ್ನಡ ಕಾವ್ಯಗಳ ಕಾವ್ಯಧರ್ಮವನ್ನು ಧರ್ಮ ನಿಯಂತ್ರಿಸಿದೆಯೇ ... ? ಚರ್ಚಿಸಿ. *15*

(c) 'ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು' – ಈ ದಿವ್ಯಾದರ್ಶ ಹರಿಶ್ಚಂದ್ರಕಾವ್ಯದಲ್ಲಿ ಹೇಗೆ ಸಾಕಾರಗೊಂಡಿದೆ ? ಚರ್ಚಿಸಿರಿ. *10*

(d) ಅನುಪಮಾ ನಿರಂಜನರವರ 'ಮಾಧವಿ' ಕಾದಂಬರಿ ಕನ್ನಡದಲ್ಲಿ ಸ್ತ್ರೀವಾದಿ ಚಿಂತನೆಯನ್ನು ಉದ್ಘಾಟಿಸಿದೆಯೇ ... ? ವಿಶ್ಲೇಷಿಸಿ. *10*

Q3. (a) ಕನ್ನಡ ಭಾಷೆಯ ಉಗಮ ಮತ್ತು ವಿಕಾಸದ ವಿವಿಧ ಹಂತಗಳನ್ನು ಸೋದಾಹರಣವಾಗಿ ವಿವೇಚಿಸಿರಿ. *15*

(b) ಕುಮಾರವ್ಯಾಸ ಭಾರತದ ಕೃಷ್ಣಸಂಧಾನ ಪ್ರಸಂಗದ ವಿಶಿಷ್ಟತೆಗಳನ್ನು ವಿವರಿಸಿ. *15*

(c) ಕನ್ನಡ ವಿಮರ್ಶೆಯ ಬೆಳಕಿನಲ್ಲಿ ಜನ್ನನ ಅಮೃತಮತಿಯ ಪಾತ್ರವನ್ನು ವಿವೇಚಿಸಿರಿ. *10*

(d) ಕನ್ನಡದಲ್ಲಿ ನವ್ಯಕಾವ್ಯದ ಉಗಮ ಮತ್ತು ವಿಕಾಸವನ್ನು ವಿವೇಚಿಸಿರಿ. *10*

Optional Province · optionalprovince.com

Q4. (a) ಕನ್ನಡಕ್ಕೆ ಬಂದ ಅನ್ಯದೇಶ್ಯಪದಗಳ ಧ್ವನಿ ಮತ್ತು ಅರ್ಥ ಬದಲಾವಣೆಯನ್ನು ಸೋದಾಹರಣವಾಗಿ ವಿವೇಚಿಸಿರಿ. *15*

(b) ನಾಗಚಂದ್ರ ಸೃಷ್ಟಿಸಿದ ರಾವಣ ಉದಾತ್ತ ಚಾರಿತ್ರ್ಯವನ್ನು ಹೊಂದಿದವನಾಗಿ ಕಂಡುಬರುವ ಪ್ರಸಂಗಗಳನ್ನು ವಿಶ್ಲೇಷಿಸಿ. *15*

(c) 'ರಾಮಧಾನ್ಯ ಚರಿತೆ' ಕಾವ್ಯ ಅಹಂ ವಿಸರ್ಜನೆಯ ಕಾವ್ಯವೇ ... ? ವಿಶ್ಲೇಷಿಸಿ. *10*

(d) ಕನ್ನಡದಲ್ಲಿ ಬಂದ ದಲಿತ ಆತ್ಮಕಥೆಗಳ ವಿಶಿಷ್ಟತೆಯನ್ನು ವಿವೇಚಿಸಿರಿ. *10*

Optional Province · optionalprovince.com

SECTION B

Q5. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. ***10×5=50***

(a) ರೂಪನಿಷ್ಠ ವಿಮರ್ಶೆ *10*

(b) ಕರ್ನಾಟಕದ ಕಲೆಗಳಿಗೆ ಕಲ್ಯಾಣ ಚಾಲುಕ್ಯರ ಕೊಡುಗೆಗಳು *10*

(c) ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ *10*

(d) ಕಾವ್ಯದಲ್ಲಿ ಅಲಂಕಾರಗಳು *10*

(e) ಕರ್ನಾಟಕದ ಸೂಫೀ ಪರಂಪರೆ *10*

Q6. (a) ಕರ್ನಾಟಕದ ಸಂಸ್ಕೃತಿಗೆ ರಾಷ್ಟ್ರಕೂಟರ ಕೊಡುಗೆಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ. *15*

(b) ವಸಾಹತೋತ್ತರ ಚಿಂತನೆಗಳು ಅಂದರೆ ಏನು ... ? ವಿವರಿಸಿ. *15*

(c) ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಆಲೂರು ವೆಂಕಟರಾಯರ ಪಾತ್ರವನ್ನು ವಿವರಿಸಿ. *10*

(d) 'ರೀತಿರಾತ್ಮಾ ಕಾವ್ಯತ್ವ' – ಇದನ್ನು ವಿಶ್ಲೇಷಿಸಿ. *10*

Q7. (a) ಭಾರತೀಯ ಸ್ತ್ರೀವಾದ ಪಾಶ್ಚಾತ್ಯ ಸ್ತ್ರೀವಾದಕ್ಕಿಂತ ಹೇಗೆ ಭಿನ್ನ ... ? ವಿವರಿಸಿ. *15*

(b) ಕರ್ನಾಟಕದಲ್ಲಿ ವಿಕಸನಗೊಂಡ ಮುಲ್ಸಿಮ್ ವಾಸ್ತುಶೈಲಿಯ ವಿಶಿಷ್ಟತೆಗಳನ್ನು ನಿರೂಪಿಸಿ. *15*

(c) ಭಾರತೀಯ ಕಾವ್ಯಮೀಮಾಂಸೆಯ ರೀತಿ ಸಿದ್ಧಾಂತ ಮತ್ತು ಪಾಶ್ಚಾತ್ಯರ ಶೈಲಿ ಸಿದ್ಧಾಂತಗಳನ್ನು ತೌಲನಿಕವಾಗಿ ವಿವೇಚಿಸಿರಿ. *10*

(d) ಕರ್ನಾಟಕ ಸಂಗೀತಕ್ಕೆ ದಾಸ ಸಾಹಿತ್ಯ ನೀಡಿದ ಕೊಡುಗೆಯನ್ನು ವಿವರಿಸಿ. *10*

Optional Province · optionalprovince.com

Q8. (a) ಮಾರ್ಕ್ಸ್‌ವಾದೀ ಸಾಹಿತ್ಯ ವಿಮರ್ಶೆ ಪಶ್ಚಿಮದಲ್ಲಿ ಬೆಳೆದು ಬಂದ ಬಗೆಯನ್ನು ವಿವರಿಸಿ. *15*

(b) ಕರ್ನಾಟಕದ ವೈಷ್ಣವ ದೇವಾಲಯಗಳ ಶಿಲ್ಪಕತೆಯ ವಿಶಿಷ್ಟತೆಯನ್ನು ವಿವರಿಸಿರಿ. *15*

(c) ಕಾವ್ಯದಲ್ಲಿ ಧ್ವನಿಯ ಸ್ಥಾನ ಯಾವುದು ? ಧ್ವನಿ ಪ್ರಭೇದಗಳನ್ನು ನಿದರ್ಶನಗಳೊಂದಿಗೆ ವಿವರಿಸಿರಿ. *10*

(d) ಭಾರತೀಯ ಸಂಸ್ಕೃತಿಗೆ ಕರ್ನಾಟಕ ಸಂಸ್ಕೃತಿ ಕೊಟ್ಟ ವಿಶಿಷ್ಟ ಕೊಡುಗೆಗಳನ್ನು ಸಮೀಕ್ಷಿಸಿರಿ. *10*

Optional Province · optionalprovince.com